ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ.ಸಿ. ಸಂಃ 747/2024**

| | | |
|---|---|---|
| ಸಾಕ್ಷಿಯ ಹೆಸರುಃ | ರಾಕೇಶ | ಫ್ರಾಸಾಃಃ 1 |
| ತಂದೆಯ ಹೆಸರುಃ | ಮಹಾದೇವ | ಚಾಸಾಃಃ 1 |
| ವಯಸ್ಸುಃ | 25 ವರ್ಷ | ಪ್ರಮಾಣೀಕರಿಸಿದ<br>ದಿಃ 13.02.2026 |
| ಉದ್ಯೋಗಃ | ಕೂಲಿ | |
| ವಾಸ ಸ್ಥಳಃ | ಮೈಸೂರು | |

ಮುಖ್ಯ ವಿಚಾರಣೆಃ ಸಸಅ ರಿಂದಃ

1. ನನಗೆ ಆರೋಪಿಗಳ ಪರಿಚಯವಿದೆ. ಈ ಪ್ರಕರಣದ ವಿಷಯ ನನಗೆ ಗೊತ್ತಿಲ್ಲ. ಚಾಸಾ-2 ಮತ್ತು 3 ರವರು ನನಗೆ ಗೊತ್ತು. ಆರೋಪಿತರು ನಮ್ಮೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ಕಬ್ಬಿಣದ ರಾಡು ಮತ್ತು ದೊಣ್ಣೆಯಿಂದ ಹೊಡೆದಿಲ್ಲ, ತಬ್ಬಿಕೊಂಡು ಕೈಯಿಂದ ಹೊಡೆದಿಲ್ಲ, ಒದ್ದಿಲ್ಲ ಹಾಗೂ ಚಾಸಾ -3 ರವರ ನೈಟಿ ಹಿಡಿದುಕೊಂಡು ಎಳೆದಾಡಿಲ್ಲ ಹಾಗೂ ನಮಗೆ ಕೊಲೆ ಬೆದರಿಕೆ ಹಾಕಿಲ್ಲ. ನಾನು ಆರೋಪಿತರ ವಿರುದ್ಧ ಯಾವುದೇ ದೂರು ನೀಡಿಲ್ಲ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.01 ಎಂದು, ಅದರಲ್ಲಿರುವ ತನ್ನ ಸಹಿಯ ನಿ.ಪಿ.01(ಎ) ಎಂದು ಗುರುತಿಸಲಾಯಿತು.

2. ಸುಮಾರು ಒಂದು ವರ್ಷದ ಹಿಂದೆ ನಾನು ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ಗಾಯಮಾಡಿಕೊಂಡು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ದಾಖಲಾಗಿದ್ದಾಗ ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ. ನಿ.ಪಿ.01 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಸಸಅ ರವರಿಂದಃ

1. ದಿಃ 28.05.2024 ರಂದು ರಾತ್ರಿ 9-00 ಗಂಟೆ ಸಮಯದಲ್ಲಿ 2 ನೇ ಆರೋಪಿಯ ಮನೆ ಮುಂದೆ ನಾನು ನಡೆದುಕೊಂಡು ಹೋಗುತ್ತಿದ್ದಾಗ, ಈ ಪ್ರಕರಣದ ಆರೋಪಿತರು ಹಳೇ ದ್ವೇಷ ಇಟ್ಟುಕೊಂಡು ಸಮಾನ ಉದ್ದೇಶದಿಂದ ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಕಬ್ಬಿಣ ರಾಡು ಹಾಗೂ

ದೊಣ್ಣೆಯನ್ನು ಹಿಡಿದುಕೊಂಡು ಬಂದು ನನಗೆ ಮುಂದೆ ಹೋಗದಂತೆ ಅಡ್ಡಗಟ್ಟಿ ಈ ನನ್ನ ಮಗನನ್ನು ಮುಗಿಸಿ ಬಿಡೋಣ ಎಂದು ಹೊಡೆಯಲು ಬಂದರು ಎಂದರೆ ಸರಿಯಲ್ಲ. ನಂತರ ನಿಮ್ಮ ಮನೆಯವರದು ಅತಿಯಾಯಿತು ಎಂದು 1 ನೇ ಆರೋಪಿ ಕಬ್ಬಿಣದ ರಾಡಿನಿಂದ ನನ್ನ ತಲೆಯ ಹಿಂಭಾಗದ ಬಲ ಭಾಗಕ್ಕೆ ಹೊಡೆದರು ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನನ್ನು ತಬ್ಬಿ ಹಿಡಿದುಕೊಂಡು ಕೈಗಳಿಂದ ಮೈಕೈಗೆ ಹೊಡೆದರು ಎಂದರೆ ಸರಿಯಲ್ಲ. 3 ನೇ ಆರೋಪಿ ಕಾಲಿನಿಂದ ಮೈಕೈಗೆ ಒದ್ದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. 4 ನೇ ಆರೋಪಿ ನನ್ನ ಬೆನ್ನಿಗೆ ಕಾಲಿನಿಂದ ಒದ್ದರು ಎಂದರೆ ಸರಿಯಲ್ಲ.

2. ನಂತರ ಚಾಸಾ - 2 ರವರಿಗೆ 5 ನೇ ಆರೋಪಿ ದೊಣ್ಣೆಯಿಂದ ತಲೆಗೆ ಹೊಡೆದರು ಎಂದರೆ ಸರಿಯಲ್ಲ. 6 ಮತ್ತು 7 ನೇ ಆರೋಪಿತರು ಚಾಸಾ - 2 ರವರ ಮುಖಕ್ಕೆ ಕೈಗಳಿಂದ ಗುದ್ದಿದರು ಎಂದರೆ ಸರಿಯಲ್ಲ.

3. ನಂತರ ಚಾಸಾ - 3 ರವರ ನೈಟಿಯನ್ನು 1 ಮತ್ತು 2 ನೇ ಆರೋಪಿತರು ಹಿಡಿದು ಎಳೆದಾಡಿ ನೈಟಿಯನ್ನು ಹರಿದು ಹಾಕಿ ಅವರಿಗೆ ಅವಮಾನ ಮಾಡಿದರು ಎಂದರೆ ಸರಿಯಲ್ಲ. ನಂತರ ಆರೋಪಿತರು ನನ್ನ ಮಗನೇ ಈ ದಿನ ತಪ್ಪಿಸಿಕೊಂಡಿದ್ದೀರಾ ನಿಮ್ಮನ್ನು ಇಂದಲ್ಲಾ ನಾಳೆ ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಿಪಿ - 1 ರಂತೆ ಪೊಲೀಸರಿಗೆ ದೂರು ನಿಡೀರುತ್ತೇನೆ ಎಂದರೆ ಸರಿಯಲ್ಲ.

4. ಈಗ ನಾವು ಹಾಗೂ ಆರೋಪಿತರು ಪರಸ್ಪರ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅದೇ ಕಾರಣಕ್ಕೆ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ವಕೀಲರಿಂದಃ</u>

ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ